
## ಇಲ್ಲಿಯವರೆಗೆ



ಜೂನ್ ತಿಂಗಳ ಬಿಸಿಲ ಧಗೆಗೆ ಮುಂಬೈಯಲ್ಲಿ ಕೇಶವಲಾಲ್ ದಣಿದಂತೆ ಕಾಣುತ್ತಾರೆ. ಮನೆಗೆ ಬಂದಾಗ ಪತ್ನಿಗೆ ಕೇಶವಲಾಲ್ ಆರೋಗ್ಯದಲ್ಲಿ ಏನೋ ವ್ಯತ್ಯಾಸ ಉಂಟಾಗಿದೆ ಎಂಬುದು ಅರಿವಿಗೆ ಬರುತ್ತದೆ. ಕೋಣೆಯ ಮೂಲೆಯಲ್ಲಿ ಹಾಸಿದ ಮೆತ್ತನೆ ಹಾಸಿಗೆ ಮೇಲೆ ಚಿಂತಾಕ್ರಾಂತರಾಗಿ ಕುಳಿತುಕೊಂಡಿರುವಂತೆಯೇ ಟೆಲಿಫೋನ್ ರಿಂಗಾಗುತ್ತದೆ. ಪತ್ನಯೇ ಫೋನ್ ರಿಸೀವ್ ಮಾಡುತ್ತಾಳೆ. ಮಹಿಳೆಯೊಬ್ಬಳು 'ಕೇಶವಲಾಲ್ ಮನೆಯಲ್ಲಿದ್ದಾರೆಯೇ?' ಎಂದು ಪ್ರಶ್ನಿಸುತ್ತಾಳೆ. ತಾವು ಯಾರೆಂದು ಹೇಳುವುದೇ ಇಲ್ಲ. ಕೊನೆಗೆ 'ಫೌರಸ್ ರೋಡಿನಿಂದ ಮಾತನಾಡುತ್ತಿದ್ದೇನೆ' ಎಂದು ಹೇಳಿದಾಗ ಭಯದಿಂದ ಕಂಪಿಸುತ್ತಾಳೆ. ಮುಂಬೈಯಲ್ಲಿ ಫೌರಸ್ ರೋಡ್ ಎಂದರೆ ಅದು ವೇಶ್ಯಾವಾಟಿಕೆಯ ಅಡ್ಡೆ ಎಂಬುದು ಎಲ್ಲರಿಗೂ ಗೊತ್ತಿರುವ ಕಾರಣ ಅಲ್ಲಿಂದಲೇ ಫೋನ್ ಬಂದಿರುವ ಕಾರಣ ಇಬ್ಬರಿಗೂ ಭಯವಾಗುತ್ತದೆ. 'ನಿಮ್ಮ ಚಿಕ್ಕಪ್ಪ ಹರಿಲಾಲ್ ಶಿವಡಿ ಆಸ್ಪತ್ರೆಯಲ್ಲಿ ಜೀವನ್ಮರಣದ ಮಧ್ಯೆ ಹೋರಾಡುತ್ತಿದ್ದಾರೆ' ಎಂಬ ಸುದ್ದಿಯನ್ನು ಮಹಿಳೆ ಹೇಳಿದಾಗ ಮತ್ತೂ ಬೇಸರಗೊಳ್ಳುತ್ತಾರೆ ಕೇಶವಲಾಲ್. ತನ್ನ ಸಂಬಂಧಿ ಸುರೇಂದ್ರಲಾಲ ಮಶರೂವಾಲ ಅವರಿಗೆ ಸುದ್ದಿ ತಿಳಿಸಿ ಇಬ್ಬರೂ ಫೌರಸ್ ರೋಡಿನಲ್ಲಿ ಮಹಿಳೆ ಹೇಳಿದ ಚೌಕ್ ಬಿಲ್ಡಿಂಗ್ ಹತ್ತಿರ ಹೋಗುತ್ತಾರೆ. ಹರಿಲಾಲ್ ಕೇಶವಲಾಲ್‌ರಿಗೆ ಚಿಕ್ಕಪ್ಪ, ಸುರೇಂದ್ರರಿಗೆ ಮಾವ.

ಇಬ್ಬರೂ ಶಿವಡಿ ಆಸ್ಪತ್ರೆಗೆ ತೆರಳಿ ಮೆಡಿಕಲ್ ಆಫೀಸರ್ ಬಳಿ ತಮ್ಮ ಪರಿಚಯ ಹೇಳಿಕೊಳ್ಳುತ್ತಾರೆ. ಆಗ 'ಒಂದು ತಾಸಿಗೂ ಮೊದಲೆ ಹರಿಲಾಲ್ ಅಸುನೀಗಿದರು ಎಂದು ತಿಳಿಸಿದ್ದಲ್ಲದೆ ಶವವನ್ನು ವಾರಸುದಾರರು ಬರುವವರೆಗೆ ಎಂದು ಶವಾಗಾರದಲ್ಲಿ ಇಟ್ಟಿದ್ದೇವೆ' ಎಂಬ ವಿಚಾರವನ್ನು ಇವರಿಬ್ಬರಿಗೆ ತಿಳಿಸುತ್ತಾರೆ. ಇಬ್ಬರಿಗೂ ದುಃಖ ಉಮ್ಮಳಿಸಿ ಬರುತ್ತದೆ.

ಜ್ವಾಲೆಗಳೆದುರು ಕೇಶವಲಾಲರು ತುಟಿಗಳನ್ನು ಕಚ್ಚಿಕೊಂಡು, ಕೈಮುಗಿದು ನಿಂತಿದ್ದರು.

'ಸುರೇಂದ್ರಜಿ...' ಸ್ವಲ್ಪ ತಡೆದು ಕೇಶವಲಾಲರು ಹೇಳಿದರು, 'ಬಾಪೂಜಿ ಕರ್ಮಕ್ಕೆ ಸದಾ ಪ್ರಾಧಾನ್ಯತೆಯನ್ನು ಕೊಡುತ್ತಿದ್ದರು... ಹರಿಲಾಲ ಚಿಕ್ಕಪ್ಪ ಸಹ ಎಂದೂ ಕರ್ಮವೆಸಗುವುದರಿಂದ ತಪ್ಪಿಸಿಕೊಳ್ಳಲಿಲ್ಲ, ಆದರೆ ಇಬ್ಬರ ಕರ್ಮ ವಿರುದ್ಧ ದಿಕ್ಕುಗಳಲ್ಲಿ ಹೋಗಿ ನಿಂತಿತು.'

ಯಾರೂ ಮಾತನಾಡಲಿಲ್ಲ. ಸುರೇಂದ್ರರು ಕೇಶವಲಾಲರ ಹೆಗಲ ಮೇಲೆ ಕೈಯನ್ನಿಟ್ಟರು.

'ಆದರೆ ಹರಿಲಾಲ್ ಚಿಕ್ಕಪ್ಪ ಹೀಗಂತೂ ಇರಲಿಲ್ಲ... ನನಗೆ ಬುದ್ಧಿ ಬಂದಂದಿನಿಂದ ನಾನು ಅವರನ್ನು ನೋಡುತ್ತಿದ್ದೇನೆ... ಇಂದು, ಎಲ್ಲೋ ಏನೋ ತಪ್ಪಾಗಿದೆ ಎಂದು ಅನ್ನಿಸುತ್ತಿದೆ. ಹರಿಲಾಲ್ ಚಿಕ್ಕಪ್ಪ ಹೀಗಿರಲಿಲ್ಲ...ಹೀಗಿರಲಿಲ್ಲ'.

'ಹೀಗಿರಲಿಲ್ಲ ಅಂದರೆ?' ಸುರೇಂದ್ರರು ಕೇಶವಲಾಲರನ್ನು ನೋಡಿದರು, 'ನೀವೇನು ಹೇಳುತ್ತಿದ್ದೀರ? ಬಹುಶಃ ಹರಿಲಾಲ ಚಿಕ್ಕಪ್ಪರನ್ನು ಯಾರೂ ಅವರ ಜೀವಮಾನವಿಡಿ ಅರ್ಥ ಮಾಡಿಕೊಳ್ಳದಾದರು ಎಂದು ಹೇಳುತ್ತಿದ್ದೀರ?' ಕೇಶವಲಾಲರು ಕಣ್ಣುಗಳನ್ನು ಮುಚ್ಚಿಕೊಂಡರು. ಮುಚ್ಚಿದ ಕಣ್ಣುಗಳಿಂದ ಕಣ್ಣೀರಿನ ಹನಿಗಳು ಉದುರುತ್ತಿದ್ದವು. ಕೇಶವಲಾಲರ ಮನಸ್ಸು ಅತೀತದ ಆಳದಲ್ಲಿಳಿಯಿತು.

### ನಾಲ್ಕು

ಅವು ಇಪ್ಪತ್ತನೆಯ ಶತಮಾನದ ಆರಂಭದ ದಿನಗಳಾಗಿದ್ದವು. 1906ರ ಧಾರಾಕಾರದ ಮಳೆಯಿಂದ ಉಕ್ಕುತ್ತಿದ್ದ ಹಿಂದೂ ಮಹಾಸಾಗರದ ಅಗಾಧ ಜಲರಾಶಿಯಲ್ಲಿ ಹಡಗೊಂದು ಅಲೆಯೆಬ್ಬಿಸುತ್ತಾ ತೀವ್ರಗತಿಯಲ್ಲಿ ಮುಂದುವರೆಯುತ್ತಿತ್ತು. ಹಡಗಿನ ಡೆಕ್‌ನಲ್ಲಿ ಸುಮಾರು ಹತ್ತೊಂಬತ್ತು ಇಪ್ಪತ್ತರ ವಯಸ್ಸಿನ ಯುವಕನೊಬ್ಬ ನಿಂತಿದ್ದ. ಅವನ ಒಂದು ದೃಷ್ಟಿಯೆದುರು ಪಶ್ಚಿಮದ ಕ್ಷಿತಿಜದಲ್ಲಿ ಇದೀಗ ತಾನೇ ಲುಪ್ತಗೊಂಡ ಹಿಂದೂಸ್ತಾನದ ನೆಲವಿತ್ತು; ಇನ್ನೊಂದು ದೃಷ್ಟಿಯೆದುರು ಕೆಲವೇ ದಿನಗಳಲ್ಲಿ ಕಣ್ಣುಗಳೆದುರು ಸಾಕಾರಗೊಳ್ಳುವ ದಕ್ಷಿಣ ಆಫ್ರಿಕಾದ ನೆಲವಿತ್ತು. ಹಿಂದೂಸ್ತಾನದ ನೆಲ ಅವರ ರೋಮರೋಮಗಳಲ್ಲಿ ಕಲೆತಿತ್ತು. ಈಗ ಅವನು ನೋಡಬೇಕಿದ್ದ ದಕ್ಷಿಣ ಆಫ್ರಿಕಾದ ದಡದ ಅಸ್ಪಷ್ಟ ನೆನಪಿತ್ತು.

ಈ ಅಸ್ಪಷ್ಟ ನೆನಪಿನ ನೆಲವನ್ನು ಬಿಟ್ಟು ಐದು ವರ್ಷಗಳೇ ಸಂದಿದ್ದವು. ಆದರೆ ಐದು ವರ್ಷಗಳ ಹಿಂದೆ ಅವನು ಆಫ್ರಿಕಾದಲ್ಲಿ ಬಾಬಾಪೂ ಅವರೊಂದಿಗೆ ದಿನಗಳನ್ನು ಕಳೆದಿದ್ದ. ಆ ದಿನಗಳಲ್ಲಿ ಎಂದು ಇಲ್ಲಿಯ ಕೆಲಸಗಳು ಪೂರ್ಣವಾಗುವುವೋ, ತಾನು ಎಂದು ಮರಳಿ ದೇಶಕ್ಕೆ ಹೋಗುವೆನೋ ಎಂಬ ಬಗ್ಗೆ ಆಗೇನೂ ಹೇಳಲು ಸಾಧ್ಯವಿರಲಿಲ್ಲ. ಬಾಬಾಪೂರವರಿಂದ ಅಗಲಿ ಕಳೆದು ನಾಲ್ಕೈದು ವರ್ಷಗಳಿಂದ ದೇಶದಲ್ಲಿ ವಾಸಿಸುತ್ತಿದ್ದ ಹರಿಲಾಲನ ಮನಸ್ಸಿನಲ್ಲಿ ಈ ಹಿಂದೂ ಮಹಾಸಾಗರದ ಅಲೆಗಳಂತೆಯೇ ಭಿನ್ನಭಿನ್ನ ಅಲೆಗಳೇಳುತ್ತಿದ್ದವು. ಹಿಂದೂಸ್ತಾನದ ನೆಲ ಎಂದೋ ಕಣ್ಣುಗಳಿಂದ ಮರೆಯಾಗಿತ್ತು; ಇನ್ನು ದಕ್ಷಿಣ ಆಫ್ರಿಕಾದ ನೆಲ ಕಣ್ಣುಗಳಿಗೆ ಗೋಚರಿಸಲು ಅನೇಕ ದಿನಗಳನ್ನು ಕಾಯಬೇಕಿತ್ತು.

***

ಹಿಂದೂಸ್ತಾನದ ಮೋಹ ಕಾಡುತ್ತಿತ್ತು. ಹದಿನೈದು ಹದಿನಾರರ, ಕಿಶೋರಾವಸ್ಥೆಯಿಂದ ಯೌವನದ ಹೊಸ್ತಿಲಲ್ಲಿ ಕಾಲಿಡುತ್ತಿದ್ದ ಗುಲಾಬ ಹರಿಲಾಲನ ಮನಸ್ಸು ಬೇಸರಗೊಂಡಿತು. ಗುಲಾಬಳ ನೆನಪು ಅವನ ಅಸ್ತಿತ್ವದ ರೋಮ ರೋಮಗಳನ್ನು ಸ್ಪರ್ಶಿಸಿತು. ಅವಳ ಚಿಟ್ಟೆಯಂಥ ಮುಗ್ಧತೆಯ ಆಕರ್ಷಣೆ ಅವನನ್ನು ಆವರಿಸಿತು. ತಾನು ಗುಲಾಬಳನ್ನು ಸಹ ತನ್ನೊಂದಿಗೆ ದಕ್ಷಿಣ ಆಫ್ರಿಕಾಕ್ಕೆ ಕರೆದೊಯ್ಯಲು ಸಾಧ್ಯವಾಗಿದ್ದರೆ ಎಷ್ಟು ಚೆಂದವಿತ್ತು!

ಆದರೆ ಮರುಕ್ಷಣವೇ ಹರಿಲಾಲನಿಗೆ ಬಾಬಾಪೂವಿನ ನೆನಪಾಯಿತು. ಅವನ ಮನಸ್ಸು ಬಾಬಾಪೂ ಅವರನ್ನು ಭೇಟಿಯಾಗಲು ವ್ಯಾಕುಲಗೊಂಡಿತು. ಬಾಬಾಪೂ ಅವರನ್ನು ನೋಡದೆ ಎಷ್ಟೋ ದಿನಗಳಾಗಿದ್ದವು. ಇನ್ನು ಕೆಲವೇ ದಿನಗಳಲ್ಲಿ ಈ ವ್ಯಗ್ರತೆಯ ಗಳಿಗೆಗಳು ಕೊನೆಗೊಳ್ಳುತ್ತವೆ. ಅನೇಕ ವರ್ಷಗಳ ಅಗಲಿಕೆಯ ನಂತರ ತಾನು ಬಾಬಾಪೂ, ಸಹೋದರರಾದ ಮಣಿಲಾಲ್, ರಾಮದಾಸ್ ಎಲ್ಲರೊಂದಿಗಿರುವೆ. ಒಂದು ವೇಳೆ ಗುಲಾಬ್ ಸಹ ಜೊತೆಗಿದ್ದಿದ್ದರೆ, ಆಕಾಶಕ್ಕೆ ಮೂರೇ ಗೇಣು... ಆದರೆ...

ಹರಿಲಾಲ ಎವೆಯಿಕ್ಕದೆ ಸಮುದ್ರದ ಅಲೆಗಳನ್ನು ನೋಡುತ್ತಿದ್ದ. ಅವನ ವಿವಾಹ ಗುಲಾಬಳೊಂದಿಗೆ ಈಗ್ಗೆ ಮೂರು ತಿಂಗಳ ಹಿಂದೆಯಷ್ಟೇ ನಡೆದಿತ್ತು. ಬಾಬಾಪೂ ಆಗ ಆ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಕುಟುಂಬದ ಹಿರಿಯರಾಗಿ, ತಂದೆಯವರ ಗೈರುಹಾಜರಿಯಲ್ಲಿ ತನ್ನ ವಿವಾಹವನ್ನು ತನ್ನ ದೊಡ್ಡಪ್ಪ ನೆರವೇರಿಸಿದ್ದರು.

ಕಹಿಖಾರದ ಅಂಶ ಬಾಯಿಗೆ ಬಂದಂತಾಗಿ ಹರಿಲಾಲ ಸಮುದ್ರದ ನೀರಿಗೆ ಉಗಿದ. ಆಗಸದಲ್ಲಿ ತೇಲುವ ಮೋಡಗಳ ಕಪ್ಪು ವೃದ್ಧಿಸುವಂತೆ ಹಡಗು ಆಗಾಗ ಹೊಗೆಯನ್ನು ಕಾರುತ್ತಿತ್ತು. ಡೆಕ್‌ನಲ್ಲಿ ಗದ್ದಲ ಕಡಿಮೆಯಾಗಿತ್ತು. ಅವನ ವಿವಾಹದ ಸಂದರ್ಭದಲ್ಲಿ ಬಾಪೂ ಆಫ್ರಿಕಾದಿಂದ ದೊಡ್ಡಪ್ಪನಿಗೆ ಬರೆದಿದ್ದ ಪತ್ರದ ನೆನಪಾಯಿತು. ಬಾಪೂ ಹೀಗೇಕೆ ಬರೆದಿದ್ದರು? ಹರಿಲಾಲನ ಮನಸ್ಸಿನಲ್ಲಿ ಈ ಪ್ರಶ್ನೆ ಇದುವರೆಗೆ ಸಾವಿರಾರು ಸಲ ಎದ್ದಿತ್ತು.

ಬಾಪೂ ತಮ್ಮ ಅಣ್ಣ ಮತ್ತು ಹರಿಲಾಲನ ದೊಡ್ಡಪ್ಪನಿಗೆ ಪತ್ರವನ್ನು ಬರೆದಿದ್ದರು–

'ನನಗೆ ಈ ವಿವಾಹ ಒಪ್ಪಿಗೆಯಿಲ್ಲ. ಹರಿಲಾಲನ ವಿವಾಹ ನೆರವೇರಿದರೂ ನೆರವೇರದಿದ್ದರೂ, ಎಲ್ಲವೂ ಈ ಹಿಂದಿನಂತೆಯೇ ನಡೆಯುವುದು. ಹರಿಲಾಲನ ಬಗ್ಗೆ ನಾನು ಒಬ್ಬ ಪುತ್ರನಂತೆ ಯೋಚಿಸುವುದನ್ನು ಈಚೆಗೆ ಬಿಟ್ಟು ಬಿಟ್ಟಿದ್ದೇನೆ.'

ಹರಿಲಾಲನಿಗೆ ಅರ್ಥವಾಗುತ್ತಿರಲಿಲ್ಲ, ತನ್ನ ವಿವಾಹದ ಬಗ್ಗೆ ಬಾಪೂ ಯಾಕಿಷ್ಟೊಂದು ನಿರ್ಲಿಪ್ತರಾದರು? ಗುಲಾಬಳಂಥ ಸೊಸೆ...